ತಾಳೆ ಎಣ್ಣೆ ಅಭಿವೃದ್ಧಿಗಾಗಿ ಯೋಜನೆ ರೂಪಿಸಿರುವುದು

೯೪೮. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತಾಳೆ ಎಣ್ಣೆ ಅಭಿವೃದ್ಧಿಗಾಗಿ ಯೋಜನೆ ರೂಪಿಸಲಾಗಿದೆಯೇ ?

ಆ) ಹಾಗಿದ್ದಲ್ಲಿ ಯಾವ ಜಿಲ್ಲೆಯಲ್ಲಿ ಯೋಜನೆ ರೂಪಿಸಲಾಗಿದೆ ?

ಇ) ಈ ಯೋಜನೆಯನ್ನು ಕೇಂದ್ರ ಸರ್ಕಾರದವರಿಂದ ಕೈಗೊಳ್ಳಲಾಗುವುದೇ ?

ಶ್ರೀ ವೈ.ಕೆ. ರಾಮಯ್ಯ (ತೋಟಗಾರಿಕೆ ರಾಜ್ಯ ಸಚಿವರು).—

ಅ) ಹೌದು. ೨ ಈ ಯೋಜನೆಯನ್ನು ನಿರೂಪಿಸಲಾಗಿದೆ.

೧. ಕೇಂದ್ರ ಸರ್ಕಾರದ ಬಯೋ ಟೆಕ್ನಾಲಜಿ ಇಲಾಖೆಯು ಆರ್ಥಿಕ ನೆರವಿನಿಂದ ೨೦೦೦ ಹೆಕ್ಟೇರ್‌ನಲ್ಲಿ ತಾಳೆ ಎಣ್ಣೆ ಅಭಿವೃದ್ಧಿ ಪಡಿಸಲು ಮತ್ತು

೨. ಕೇಂದ್ರ ಸರ್ಕಾರದ ವ್ಯವಸಾಯ ಮತ್ತು ಸಹಕಾರ ಇಲಾಖೆಯು ಆರ್ಥಿಕ ನೆರವಿನಿಂದ ೫೦,೦೦೦ ಹೆಕ್ಟೇರ್ ಪ್ರದೇಶದಲ್ಲಿ ತಾಳೆ ಎಣ್ಣೆ ಅಭಿವೃದ್ಧಿ ಪಡಿಸಲು

ಆ) ಈ ಯೋಜನೆಯನ್ನು ಹಂತ ಹಂತವಾಗಿ ರಾಜ್ಯದ ೫ ಮುಖ್ಯ ನೀರಾವರಿ ಜಲಾನಯನ ಪ್ರದೇಶದಲ್ಲಿ ಹಾಕಿಕೊಳ್ಳಲು ಯೋಜಿಸಲಾಗಿದೆ. ಈ ಜಲಾನಯನ ಪ್ರದೇಶಗಳಿಂದರೆ.

೧. ಭದ್ರಾ ಜಲಾಶಯ ಅಚ್ಚುಕಟ್ಟು ಪ್ರದೇಶ

೨. ಕಾವೇರಿ ಜಲಾಶಯ ಅಚ್ಚುಕಟ್ಟು ಪ್ರದೇಶ

೩. ತುಂಗಭದ್ರಾ ಜಲಾಶಯ ಅಚ್ಚುಕಟ್ಟು ಪ್ರದೇಶ

೪. ಕೃಷ್ಣಾ ಜಲಾಶಯ ಅಚ್ಚುಕಟ್ಟು ಪ್ರದೇಶ

೫. ಘಟಪ್ರಭಾ ಮತ್ತು ಘಟಪ್ರಭಾ ಜಲಾಶಯ ಅಚ್ಚುಕಟ್ಟು ಪ್ರದೇಶ

ಇ) ಹೌದು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಜಂಟಿ ಆಶ್ರಯದಲ್ಲಿ ಈ ಯೋಜನೆಯನ್ನು ಕೈಗೊಳ್ಳಲು ರೂಪಿಸಲಾಗಿದೆ.

ಜಿನಿಗೆಹಳ್ಳ ಸೇತುವೆಗೆ ಸುಂಕ ವಸೂಲಿಯ ಬಗ್ಗೆ

೯೮೨. ಶ್ರೀ ಪಿ.ಸಿ. ಸಿದ್ದನಗೌಡ (ಕಲಘಟಗಿ).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಿನಿಗೆಹಳ್ಳ ಸೇತುವೆಯ ಸುಂಕವನ್ನು ವಸೂಲಿ ಮಾಡುವುದು ರಾಜ್ಯ ಸರ್ಕಾರದ ಉದ್ದೇಶವೋ ಅಥವಾ ಕೇಂದ್ರ ಸರ್ಕಾರದ ಉದ್ದೇಶವೋ

ಆ) ಪ್ರತಿ ದಿನ ವಸೂಲಿ ಆಗತಕ್ಕ ಹಣವೆಷ್ಟು ಹಾಗೂ ಈವರೆಗೂ ಸಂದಾಯವಾದ ಮೊತ್ತವೆಷ್ಟು.

ಇ) ಎಲ್ಲಿಯವರೆಗೂ ಈ ಸುಂಕವನ್ನು ವಸೂಲಿ ಮಾಡಲಾಗುವುದು.

ಈ) ಸೇತುವೆ ನಿರ್ಮಾಣಕ್ಕೆ ಖರ್ಚಾದ ಹಣವೆಷ್ಟು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).

ಅ) ಸೇತುವೆಯ ಸುಂಕ ವಸೂಲಿ ಕೇಂದ್ರ ಸರ್ಕಾರದ ನೀತಿಯಾಗಿದೆ.

ಆ) ಪ್ರತಿದಿನ ವಸೂಲಿ ಆಗುವ ಹಣ ಸರಾಸರಿ ೧೬೮೦ ರೂ.ಗಳು. ಈವರೆಗೂ ಅಂದರೆ ದಿನಾಂಕ ೩೧-೧೨-೧೯೮೭ರ ವರೆವಿಗೆ ಸಂದಾಯವಾಗಿರುವ ಮೊತ್ತ ೧೪,೫೯,೪೪೯ ರೂ.ಗಳು.